<u>**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**</u>
<u>**ಕೊಡಗು, ಮಡಿಕೇರಿ.**</u>

<u>**ಸ್ಪೆಷಲ್ ಕೇಸ್ ನಂ. 54/2019**</u>

**ಪ್ರಾಸಾ ಃ 5**

**ಚಾಸಾ ಃ 3**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | **ನವರತ್** |
| **ತಂದೆಯ ಹೆಸರು** | ಃ | **ಕೃಷ್ಣಪ್ಪ** |
| **ವಯಸ್ಸು** | ಃ | **38 ವರ್ಷ** |
| **ವೃತ್ತಿ** | ಃ | **ವ್ಯವಸಾಯ** |
| **ವಾಸ** | ಃ | **ನಗರೂರು, ಸೋಮವಾರಪೇಟೆ.** |

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ 02.08.2023**

<u>**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದಃ**</u>

ನನಗೆ ಪ್ರಾಸಾ-1 ಹಾಗೂ ಪ್ರಾಸಾ-2 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ಕಳೆದ ಮೂರೂವರೆ ವರ್ಷಗಳ ಹಿಂದೆ ಪೊಲೀಸರು ಸಂಜೆ 5.30 ಸುಮಾರಿಗೆ ನನಗೆ ಫೋನ್ ಮಾಡಿ ಈ ಘಟನೆಯ ಬಗ್ಗೆ ವಿಚಾರಿಸಿದರು. ಆ ಪ್ರಕಾರ ಒಂದು ದಿನ ಸಂಜೆ 5.30 ಗಂಟೆ ಸಮಯದಲ್ಲಿ ನಾನು ಸೋಮವಾರಪೇಟೆಯಿಂದ ಕಕ್ಕಿ ಹೊಳೆ ಮುಖಾಂತರ ನನ್ನ ಮನೆಗೆ ಹೋಗುತ್ತಿದ್ದೆ. ಪ್ರಾಸಾ-1 ಹಾಗೂ ಪ್ರಾಸಾ-2 ರವರು ಅಬಿಮನ್ಯು ಮನೆಯ ಬಳಿ ಇದ್ದರು. ಅವರನ್ನು ನೋಡಿ ನಾನು ನನ್ನ ಸ್ಕೂಟರನ್ನು ನಿಲ್ಲಿಸಿ, ಅವರ ಜೊತೆ ಮಾತನಾಡಿದೆ. ಆಗ ಆರೋಪಿ ತನ್ನ ಜೆನ್ ಕಾರಿನಲ್ಲಿ ಸೋಮವಾರಪೇಟೆ ಕಡೆಯಿಂದ ಬಂದು ನಾವು ಮಾತನಾಡುತ್ತಿದ್ದ ಸ್ಥಳದ ಎದುರು ಇರುವ ಪೆಟ್ರೋಲ್ ಬಂಕ್‌ನ ಒಳಗೆ ಹೋಗಿ ಹೊರಗೆ ಬಂದು, ಮತ್ತೆ ಪುನಃ

ಸೋಮವಾರಪೇಟೆ ಕಡೆ ಹೋದರು. ಆರೋಪಿ ನನ್ನ ಜೊತೆಯಾಗಲಿ, ಪ್ರಾಸಾ-1 ಅಥವಾ ಪ್ರಾಸಾ-2 ರವರ ಜೊತೆ ಮಾತನಾಡಿರುವುದಿಲ್ಲ. ಮಾರನೆ ದಿನ ಪ್ರಾಸಾ-1 ಹಾಗೂ ಆರೋಪಿಗು ಎಳೆದಾಟ ಆಗಿ ಕೋವಿಯಿಂದ ಗುಂಡು ಮಿಸ್ ಫಯರ್ ಆಗಿದೆ ಎಂದು ನನಗೆ ಗೊತ್ತಾಯಿತು. ಈ ಘಟನೆಯಾದ 4 ತಿಂಗಳ ಬಳಿಕ ಪೊಲೀಸರು ನನ್ನನ್ನು ಈ ಘಟನೆಯ ಬಗ್ಗೆ ವಿಚಾರಿಸಿದ್ದಾರೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ಪೊಲೀಸರ ಮುಂದೆ ನೀಡಿದ ಹೇಳಿಕೆ ಮತ್ತು ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ).

<u>ಪಾಟೀಸವಾಲು ಸರ್ಕಾರಿ ಅಭಿಯೋಜಕರವರಿಂದಃ</u>

ದಿನಾಂಕಃ20.10.2019 ರಂದ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಪ್ರಾಸಾ-1 ಹಾಗೂ ಪ್ರಾಸಾ-2 ರವರ ಜೊತೆ ಮಾತನಾಡುತ್ತಿದ್ದೆ ಅಂದರೆ ಸರಿ. ಆರೋಪಿ ಪೆಟ್ರೋಲ್ ಬಂಕ್ ನ ಒಳಗೆ ಹೋಗಿ ಹೊರಗೆ ಬಂದಾಗ ಪ್ರಾಸಾ-1 ರವರನ್ನು ಉದ್ದೇಶಿಸಿ ಏನೋ ವಡ್ಡ ಸೂಳೆಮಗನೆ, ನಿನ್ನ ಅಮ್ಮನ ತಾಯಿನ ಕೇಯ, ನಿನ್ನನ್ನು ತೆಗೆಯದೇ ಬಿಡುವುದಿಲ್ಲ ಎಂದು ಬೈದು, ಅದೇ ಕಾರಿನಲ್ಲಿ ಸೋಮವಾರಪೇಟೆ ಕಡೆಗೆ ಹೋದರು ಅಂದರೆ ಸರಿಯಲ್ಲ. ಆರೋಪಿ ಪ್ರಾಸಾ-1 ರವರನ್ನು ಕೊಲ್ಲುವ ಉದ್ದೇಶದಿಂದ ಅದೇ ದಿನ ಸಂಜೆ 7.40 ಕ್ಕೆ ಕಾನ್ವೆಂಟ್ ಬಾಣೆಯ ರಾಜಣ್ಣನವರ ಅಂಗಡಿಯ ಮುಂದೆ ಕೋವಿಯಿಂದ ಗುಂಡು ಹಾರಿಸಿರುತ್ತಾರೆ ಅಂದರೆ ಸರಿಯಲ್ಲ. ಪ್ರಾಸಾ-1 ಹಾಗೂ ಆರೋಪಿ ಇಬ್ಬರು ಕೋವಿಯಿಂದ ಎಳೆದಾಡುವ ಸಂದರ್ಭದಲ್ಲಿ ಮಿಸ್ ಫಯರ್ ಆಗಿರುವುದು ಸುಳ್ಳು ಅಂದರೆ ಸರಿಯಲ್ಲ. ಆರೋಪಿ ನನ್ನ ಸ್ನೇಹಿತ ಅಂದರೆ ಸರಿ. ಅದೇ ರೀತಿ ಪ್ರಾಸಾ-1 ಮತ್ತು ಪ್ರಾಸಾ-2 ರವರು ಸಹ ನನ್ನ ಸ್ನೇಹಿತರು. ಆರೋಪಿ ನನ್ನ ಸ್ನೇಹಿತರಾದ ಕಾರಣ ಆರೋಪಿ ಪ್ರಾಸಾ-

1 ರವರಿಗೆ ಬೈದದನ್ನು ಕೇಳಿಸಿಕೊಂಡಿಲ್ಲ ಎಂದು ಮತ್ತು ಎಳೆದಾಟ ಮಾಡುವಾಗ ಮಿಸ್ ಫಯರ್ ಆಗಿ ಕೋವಿಯಿಂದ ಗುಂಡು ತಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಈಗ ಸಾಕ್ಷಿಗೆ ಒಂದು ಹೇಳಿಕೆ ತೋರಿಸಿ, ಸದರಿ ಹೇಳಿಕೆಯಲ್ಲಿ ಈಗ ಓದಿ ಹೇಳಿದಂತೆ "ಸೋಮವಾರಪೇಟೆ ಕಡೆಗೆ ಹೋಗುತ್ತಿದ್ದು.......................ನನಗೆ ತಿಳಿದಿರುತ್ತದೆ" ಎಂದು ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು ಆರೋಪಿ ಪರ ಎ.ಜಿ.ಜಿ., ವಕೀಲರಿಂದಃ</u>**

ನಾನು ನಿಂತ ಜಾಗದಿಂದ ಆರೋಪಿಯ ಕಾರು ಹೋದ ಸ್ಥಳಕ್ಕೆ 20 ಅಡಿ ದೂರ ಇದೆ. ಅಲ್ಲಿ ವಾಹನಗಳು ಹಾಗೂ ಜನರು ತುಂಬಾ ಓಡಾಡುತ್ತಾರೆ ಅಂದರೆ ಸರಿ. ಅಲ್ಲಿ ಜನರು ಹಾಗೂ ವಾಹನಗಳು ಜಾಸ್ತಿ ಓಡಾಡುತ್ತಿದ್ದ ಕಾರಣ ಆರೋಪಿ ಮಾತನಾಡಿದರೆ ಕೇಳಿಸುವುದಿಲ್ಲ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿ ಮಾತನಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ವಿಶ್ ಮಾಡುವಾಗ ಆರೋಪಿ ಕಾರನ್ನು ನಿಲ್ಲಿಸಿರುವುದಿಲ್ಲ. ಆರೋಪಿ ಪೆಟ್ರೋಲ್ ಬಂಕ್ ನಲ್ಲಿ ತನ್ನ ವಾಹನಕ್ಕೆ ಗಾಳಿ ಹಿಡಿಸಲು ಅಲ್ಲಿಗೆ ಹೋಗಿದ್ದರು ಅಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನಾನು ಹಾಗೂ ಆರೋಪಿ ಆತ್ಮೀಯ ಸ್ನೇಹಿತರು ಅಂದರೆ ಸಾಕ್ಷಿ ಮೊದಲು ನಾವು ಚನ್ನಾಗಿದ್ದೆವು, ಈಗ ಎಷ್ಟೋ ವರ್ಷಗಳಿಂದ ಅಷ್ಟೊಂದು ಆತ್ಮೀಯತೆ ಇಲ್ಲಾ ಎಂದು ನುಡಿಯುತ್ತಾರೆ. ಅಲ್ಲಿ ಸೇರಿದ್ದ ಜನರು ಕಾರಿನಿಂದ ಕೋವಿ ಎಳೆದಾಡುತ್ತಿರುವಾಗ ಮಿಸ್ ಫಯರ್ ಆಗಿದೆ ಎಂದು ಹೇಳುತ್ತಿದ್ದರು ಅಂದರೆ ಸರಿ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

Sd/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.